ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 28-01-1976.

# *ಅತ್ಮಿಕ ನಕ್ಷತ್ರಗಳ ಮಹಾಸಭೆ*

(तीन श्रेष्ठ ईश्वरीय वरदान)

**ಪ್ರಕೃತಿ ಮತ್ತು ಮಾಯೆಯ ಮೇಲೆ ವಿಜಯವನ್ನು ಪ್ರಾಪ್ತಿ ಮಾಡಿಸುವವರು, ಸಫಲತೆಯ ಲಕ್ಷಣಗಳನ್ನು ಕೊಡುವವರು, ಸರ್ವ ಶಕ್ತಿಗಳಿಗೆ ಅಧಿಕಾರಿಯನ್ನಾಗಿ ತಯಾರು ಮಾಡುವ ಶಿವ ಪರಮಾತ್ಮ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾರವರು ನಕ್ಷತ್ರಗಳ ಆತ್ಮಿಕ ಮಹಾಸಭೆಯನ್ನು ನೋಡುತ್ತಿದ್ದಾರೆ. ಮಹಾಸಭೆಯಲ್ಲಿ ವಿಶೇಷವಾಗಿ ಮೂರು ಪ್ರಕಾರದ ನಕ್ಷತ್ರಗಳಿವೆ. ನಾನು ಯಾವ ನಕ್ಷತ್ರವಾಗಿದ್ದೇನೆ? ಎಂದು ಪ್ರತಿಯೊಂದು ನಕ್ಷತ್ರಗಳು ತಮ್ಮನ್ನು ತಾವು ತಿಳಿದುಕೊಂಡಿದ್ದಾರೆ. ಒಂದನೆಯದಾಗಿದೆ- ಸಫಲತೆಯ ನಕ್ಷತ್ರಗಳು, ಎರಡನೆಯದು – ಅದೃಷ್ಟ ನಕ್ಷತ್ರಗಳು ಮತ್ತು ಮೂರನೆಯದು ಭರವಸೆಯ ನಕ್ಷತ್ರಗಳು. ಈಗ ಪ್ರತಿಯೊಬ್ಬರೂ ತಮ್ಮೊಂದಿಗೆ ತಾವು ಕೇಳಿಕೊಳ್ಳಿ – ನಾನು ಯಾರಾಗಿದ್ದೇನೆ? ಇಡೀ ದಿನದ ದಿನಚರ್ಯದಲ್ಲಿ ಸ್ವಯಂನ ಸಂಕಲ್ಪ, ಶ್ವಾಸ, ಸಮಯ, ಮಾತು, ಕರ್ಮ ಮತ್ತು ಸಂಬಂಧ ಹಾಗೂ ಸಂಪರ್ಕದಲ್ಲಿ ಸಫಲತಾಮೂರ್ತಿ ಅರ್ಥಾತ್ ಸಫಲತೆಯ ನಕ್ಷತ್ರಗಳೆಂದು ಅನುಭವ ಮಾಡುತ್ತೀರಾ? ಹೇಗೆ ತಂದೆಯ ಮೂಲಕ ಸುಖ, ಶಾಂತಿ, ಜ್ಞಾನರತ್ನಗಳ ಸಂಪತ್ತೆಲ್ಲವೂ ಜನ್ಮಸಿದ್ಧ ಅಧಿಕಾರದ ರೂಪದಲ್ಲಿ ಪ್ರಾಪ್ತಿಯಾಗಿದೆಯೋ ಹಾಗೆಯೇ ಪ್ರತಿಯೊಂದು ಮಾತಿನಲ್ಲಿ ಮತ್ತು ಪ್ರತೀ ಸಮಯದ ಸಫಲತೆಯೂ ಸಹ ಜನ್ಮಸಿದ್ಧ ಅಧಿಕಾರದ ರೂಪದಲ್ಲಿ ಅನುಭವವಾಗುತ್ತದೆ ಅರ್ಥಾತ್ ಸಹಜಪ್ರಾಪ್ತಿಯ ಅನುಭವವಾಗುತ್ತದೆಯೇ ಅಥವಾ ಪರಿಶ್ರಮದ ನಂತರ ಸಹಜತೆಯ ಅನುಭವವಾಗುತ್ತದೆಯೇ? ಪರಿಶ್ರಮವು ಹೆಚ್ಚಾಗಿರುತ್ತದೆ ಮತ್ತು ಸಫಲತೆಯು ಕಡಿಮೆಯೆಂದು ಅನುಭವವಾಗುತ್ತದೆಯೇ? ಯೋಚಿಸುವುದು, ಕಾರ್ಯವನ್ನು ಮಾಡುವುದರಲ್ಲಿ ಎಷ್ಟು ವಿಚಾರ ಮಾಡುತ್ತೀರೋ ಅಷ್ಟೇ ಸಂಕಲ್ಪ ಮತ್ತು ಕರ್ಮದ ಪ್ರತ್ಯಕ್ಷಫಲದ ಪ್ರಾಪ್ತಿಯಾಗುತ್ತದೆಯೇ? ಅಥವಾ ಆಗಿಬಿಡುತ್ತದೆ, ಈಗಿಲ್ಲವೆಂದರೆ ಮುಂದೆ ಆಗುತ್ತದೆ - ಈ ರೀತಿ ಭವಿಷ್ಯಫಲದ ಭರವಸೆಗಳ ಮೇಲೆ ನಡೆಯುತ್ತೀರಾ? ಸಂಕಲ್ಪದ ಉತ್ಪತ್ತಿಯ ಜೊತೆಯಲ್ಲಿ ಸಫಲತೆಯಾಗಿಬಿಟ್ಟಿದೆ- ಈ ನಿಶ್ಚಯದ ಸಂಕಲ್ಪವು ಜೊತೆಜೊತೆಗಿರುತ್ತದೆಯೇ? ಹೇಗೆ ಪ್ರತೀ ಹೆಜ್ಜೆಯಲ್ಲಿ ಪದಮಗಳ ಗಾಯನವಿದೆಯೋ ಹಾಗೆಯೇ ಪ್ರತೀ ಹೆಜ್ಜೆಯಲ್ಲಿ ಸಫಲತೆಯು ಸಮಾವೇಶವಾಗಿದೆ. ಸಂಕಲ್ಪ ಹಾಗೂ ಕರ್ಮದ ಬೀಜದಲ್ಲಿ ಸಫಲತೆಯೆಂಬ ವೃಕ್ಷವು ಸಮಾವೇಶವಾಗಿದೆ. ಈ ರೀತಿ ಅನುಭವವಾಗುತ್ತದೆ - ಸಫಲತೆಯು ನೆರಳಿನ ಸಮಾನ ಕರ್ಮದ ಹಿಂದಿಂದೆಯೇ ಇದೆ ಎನ್ನುವಂತಿರುತ್ತದೆ. ಅವರಿಗೆ ಸಫಲತೆಯ ನಕ್ಷತ್ರವೆಂದು ಹೇಳಲಾಗುತ್ತದೆ.

ಎರಡನೆಯವರು ಅದೃಷ್ಟ ನಕ್ಷತ್ರಗಳು, ಅದೃಷ್ಟ ನಕ್ಷತ್ರಗಳಲ್ಲಿಯೂ ಸಹ ನಂಬರ್ ಇದೆ. ಅದೃಷ್ಟ ನಕ್ಷತ್ರಗಳ ವಿಶೇಷತೆಯು ಇದೇ ಆಗಿದೆ- ಅವರು ಯಾವುದೇ ಸಂಕಲ್ಪ ಹಾಗೂ ಕರ್ಮವನ್ನು ಮಾಡುತ್ತಾರೆಯೋ ಅದರಲ್ಲಿ ನಿಮಿತ್ತಮಾತ್ರ ಪರಿಶ್ರಮವಿರುತ್ತದೆ ಆದರೆ ಪರಿಶ್ರಮದ ಲೆಕ್ಕದಿಂದ ಫಲದ ಪ್ರಾಪ್ತಿಯು ಹೆಚ್ಚಿನದಾಗಿರುತ್ತದೆ. ಅದೃಷ್ಟ ನಕ್ಷತ್ರಗಳು ತಮ್ಮ ಅದೃಷ್ಟವನ್ನು ತಿಳಿದುಕೊಂಡಿದ್ದರೂ ಸಹ ಪ್ರತೀ ಸಮಯದಲ್ಲಿ ಬಾಪ್‌ದಾದಾ ರವರಿಗೆ ಲಕ್ಷ-ಲಕ್ಷದಷ್ಟು ಧನ್ಯವಾದಗಳನ್ನು ಹೇಳುತ್ತಾರೆ- ನನ್ನ ಅದೃಷ್ಟದ ಬೀಗವು ತೆರೆದಿದೆ ಎಂದು ಹೇಳುತ್ತಾರೆ. ಅದೃಷ್ಟ ನಕ್ಷತ್ರಗಳ ವಾಣಿಯಲ್ಲಿ ಮಹಾನರನ್ನಾಗಿ ಮಾಡುವಂತಹ ತಂದೆಯ ಮಹಿಮೆಯೆಲ್ಲವೂ ಸ್ವತಹವಾಗಿಯೇ ಹೃದಯದಿಂದ ಬರುತ್ತಿರುತ್ತದೆ ಮತ್ತು ಅವರ ರೂಪದಲ್ಲಿ ವಿಶೇಷವಾಗಿ ಖುಷಿಯ ಹೊಳಪು ಕಂಡುಬರುತ್ತದೆ. ಅವರ ವಿಶೇಷ ಯೋಜನೆಗಳು- ಸದಾ ತಂದೆಯ ಹೆಸರನ್ನು ಪ್ರಸಿದ್ಧಗೊಳಿಸುವ, ರಿಟರ್ನ್ ಕೊಡುವ ಅರ್ಥಾತ್ ತಂದೆಯ ಪ್ರತಿಯೊಂದು ಕಾರ್ಯದಲ್ಲಿ ತಮ್ಮ ಜೀವನದ ಮೂಲಕ ಪ್ರತ್ಯಕ್ಷ ಮಾಡುವಂತದ್ದಾಗಿರುತ್ತದೆ. ಸದಾ ತಂದೆಯ ಸ್ನೇಹಿಯಾಗಿರುವ ಹಾಗೂ ತಂದೆಗೆ ಸ್ನೇಹಿಯನ್ನಾಗಿ

ಮಾಡುವಂತದ್ದಾಗಿರುತ್ತದೆ. ಸದಾ ಸ್ಮೃತಿಯಲ್ಲಿ ಹಾಗೂ ವಾಣಿಯಲ್ಲಿ ವಾಹ್ ಬಾಬಾ! ಮತ್ತು ವಾಹ್ ಅದೃಷ್ಟವೇ! ಎನ್ನುವ ಸ್ಲೋಗನ್ ಇರುತ್ತದೆ. ಈ ರೀತಿ ತಮ್ಮನ್ನು ಅದೃಷ್ಟ ನಕ್ಷತ್ರಗಳೆಂದು ತಿಳಿಯುತ್ತೀರಾ?

ಮೂರನೆಯವರಾಗಿದ್ದಾರೆ – ಭರವಸೆಯ ನಕ್ಷತ್ರಗಳು, ಅವರ - ವಿಶೇಷತೆಯೇನಾಗಿರುತ್ತದೆ? ಭರವಸೆಯ ನಕ್ಷತ್ರಗಳಿಂದ ಸಹ ಕೆಲವರು ಸಫಲತಾಮೂರ್ತಿಯೂ ಆಗಿಬಿಡುತ್ತಾರೆ. ಭರವಸೆಯ ನಕ್ಷತ್ರಗಳು ತಂದೆಯ ಹಾಗೂ ಶ್ರೇಷ್ಠ ಆತ್ಮರ ಜೊತೆಯನ್ನು ತೆಗೆದುಕೊಳ್ಳುತ್ತಾ ನಡೆಯುತ್ತಾರೆ. ಪ್ರತೀ ಹೆಜ್ಜೆಯಲ್ಲಿ ಆಶ್ರಯದ ಆಧಾರದಲ್ಲಿಯೇ ನಡೆಯುತ್ತಾರೆ. ಪ್ರತಿಯೊಂದು ಸಂಕಲ್ಪ ಮತ್ತು ಕರ್ಮದಲ್ಲಿ ಆಗುತ್ತದೆಯೋ ಅಥವಾ ಇಲ್ಲವೋ, ಶೇಷ್ಠವಾಗಿದೆಯೇ ಅಥವಾ ಸಾಧಾರಣವಾಗಿದೆಯೇ, ಮಾಡುವುದೇ ಅಥವಾ ಬೇಡವೇ ಎನ್ನುವ ನಿರ್ಣಯ ಶಕ್ತಿಯಿರುವುದಿಲ್ಲ ಅರ್ಥಾತ್ ಸ್ವಯಂ ನ್ಯಾಯಾಧೀಶನಾಗಲು ಸಾಧ್ಯವಾಗುವುದಿಲ್ಲ. ಮತ್ತೆ-ಮತ್ತೆ ನಿರ್ಣಯ ತೆಗೆದು ಕೊಳ್ಳುವುದಕ್ಕಾಗಿ ಯಾವುದೇ ನ್ಯಾಯಾಧೀಶನ ಅವಶ್ಯಕತೆಯುಂಟಾಗುತ್ತದೆ. ಶ್ರೇಷ್ಠ ಸಂಕಲ್ಪದವರಾಗಿರುತ್ತಾರೆ ಆದರೆ ಧೃಡ ಸಂಕಲ್ಪದವರಾಗಿರುವುದಿಲ್ಲ. ಪ್ರತಿಯೊಂದು ಪರಿಸ್ಥಿತಿಯಲ್ಲಿಯೂ ಹಾಗೂ ಸೇವೆಯ ಕಾರ್ಯದಲ್ಲಿ ಉಮ್ಮಂಗ-ಉತ್ಸಾಹವಿರುತ್ತದೆ ಆದರೆ ಸಾಹಸವು ಕಡಿಮೆಯಿರುತ್ತದೆ. ಅದಕ್ಕಾಗಿ ಸಾಹಸವನ್ನು ಕೊಡುವಂತಹ ಜೊತೆಗಾರರು ಬೇಕಾಗುತ್ತದೆ. ಯೋಜನೆಗಳು ಬಹಳ ಒಳ್ಳೆಯದಾಗಿರುತ್ತದೆ. ಸಂಕಲ್ಪವೂ ಸಹ ಸಮರ್ಥವಾಗಿರುತ್ತದೆ. ಆದರೆ ಸಂಪೂರ್ಣವಾಗಿ ಸ್ವರೂಪದಲ್ಲಿ ತರಲು ಸಾಧ್ಯ ವಾಗುವುದಿಲ್ಲ. ಅರ್ಧ ಅಥವಾ ಅದಕ್ಕಿಂತಲೂ ಕಡಿಮೆ ಲೆಕ್ಕದಿಂದ ವಾಣಿಯ ಮೂಲಕ, ಸ್ವಲ್ಪ ಕರ್ಮದ ಮೂಲಕ ಸಂಪನ್ನ ಮಾಡಲು ಸಾಧ್ಯವಾಗುತ್ತದೆ ಆದರೆ ಅವರ ಒಂದು ವಿಶೇಷತೆಯಿರುತ್ತದೆ ಪ್ರತೀ ಸಮಯದಲ್ಲಿ ಆಶ್ರಯವನ್ನು ತೆಗೆದುಕೊಳ್ಳುವ ಕಾರಣದಿಂದ ತಂದೆಯ ನೆನಪಿರುತ್ತದೆ. ಅವರ ಮುಖದಿಂದ ನಶೆಯಿಂದ ಮತ್ತು ನಿಶ್ಚಯದಿಂದ ಈ ಮಾತು ಹೊರಬರುತ್ತದೆ – ನಮ್ಮ ಬಾಬಾ ನಮ್ಮ ಜೊತೆಯಿದ್ದಾರೆ. ಸಂಕಲ್ಪವನ್ನು ಕರ್ಮದಲ್ಲಿ ತಂದು ತೋರಿಸಿಸುತ್ತೇನೆ ಇಂತಹ ದಿನವೂ ಸಹ ಬರುತ್ತದೆ ಎನ್ನುವ ಭರವಸೆಯು ಪ್ರತೀ ಸಮಯದಲ್ಲಿಯೂ ಇರುತ್ತದೆ. ಹೃದಯವಿಧೀರ್ಣರಾಗುವುದಿಲ್ಲ (ಮಾನಸಿಕವಾಗಿ ಬಲಹೀನವಾಗುವುದಿಲ್ಲ). ಸಂಬಂಧ ಮತ್ತು ಸಂಪರ್ಕದಲ್ಲಿಯೂ ಸಹ ಸರ್ವರ ಸತ್ಕಾರವನ್ನು ಮಾಡುವ ಕಾರಣ ಸ್ನೇಹಿಯಾಗಿರುತ್ತಾರೆ. ಅವರ ಚಹರೆಯಲ್ಲಿ ಪರಿವಾರದ ಜೊತೆ ಸದಾ ಸ್ನೇಹದ ಹೊಳಪು ಕಂಡುಬರುತ್ತದೆ. ಇಂತಹ ಭರವಸೆಯ ನಕ್ಷತ್ರಗಳು ಮಾಯೆಯ ಒಂದು ವಿಶೇಷ ಯುದ್ಧದಿಂದ ಸುರಕ್ಷಿತವಾಗಿರುತ್ತಾರೆ. ಅದು ಯಾವ ಯುದ್ಧವಾಗಿದೆ? ಅವರು ಎಂದೂ ಸಹ ದೇಹಾಭಿಮಾನದಲ್ಲಿ ಬರುವುದಿಲ್ಲ. ದೇಹಾಭಿಮಾನ ಅರ್ಥಾತ್ ಬುದ್ಧಿವಂತಿಕೆಯ ಅಭಿಮಾನ ಮತ್ತು ಬುದ್ಧಿಯ ಅಭಿಮಾನವಾಗಿದೆ. ಅವರು ಇದರಿಂದ ಸುರಕ್ಷಿತವಾಗಿರುತ್ತಾರೆ. ಅವರ ಬುದ್ಧಿಯಲ್ಲಿ ಯಾವುದೇ ವಿಚಾರವು ನಡೆಯುವುದಿಲ್ಲ ಎನ್ನುವಂತಿರುವುದಿಲ್ಲ. ಯೋಜನೆಗಳ ವಿಚಾರವು ನಡೆಯುತ್ತಿರುತ್ತದೆ. ಸಂಕಲ್ಪವೂ ಬರುತ್ತದೆ. ಆದರೆ, ಧೃಡಸಂಕಲ್ಪವಿರದ ಕಾರಣದಿಂದ ಜೊತೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ತಿಳಿಯಿತೆ-ಮೂರು ಪ್ರಕಾರದ ನಕ್ಷತ್ರಗಳು ಯಾವು ದಾಗಿದೆ? ಭರವಸೆಯ ನಕ್ಷತ್ರಗಳ ಮೇಲೆ ತಂದೆಗೂ ಸಹ ಭರವಸೆಯಿದೆ, ಯಾವಾಗ ಬೇಕಾದರೂ ಹೈಜಂಪ್ ಮಾಡಬಹುದು. ಯಾವಾಗ ಬೇಕಾದರೂ ಎಲ್ಲರ ಭರವಸೆಯನ್ನು ತನ್ನಲ್ಲಿ ಇರಿಸಲು ನಿಮಿತ್ತರಾಗಿ ಬಿಡುತ್ತಾರೆ. ಆದರೆ ಇವರು ಭರವಸೆಯಿರುವವರಾಗಿದ್ದಾರೆ. ಭರವಸೆಯಿರುವವರಲ್ಲಿ ಭರವಸೆಯನ್ನಿಡುವುದು - ಈ ಡ್ರಾಮಾದಲ್ಲಿ ಕೆಲಕೆಲವರ ಅದ್ಭುತವಾದ ಪಾತ್ರವೂ ಸಹ ಮಾಡಲ್ಪಟ್ಟಿದೆ. ಒಳ್ಳೆಯದು-

**ಸ್ವಯಂನ್ನು ಸದಾ ಸಫಲತೆಯ ನಕ್ಷತ್ರವನ್ನಾಗಿ ಮಾಡುವಂತಹ ಲಕ್ಷ್ಯ ಹಾಗೂ ಲಕ್ಷಣವನ್ನು ತೋರಿಸುವಂತಹ, ಸರ್ವಶಕ್ತಿಗಳ ಅಧಿಕಾರಿ, ತಂದೆಯ ಸರ್ವಪ್ರಾಪ್ತಿಗಳ ಅಧಿಕಾರಿ, ಬ್ರಹ್ಮಾಂಡ ಮತ್ತು ವಿಶ್ವದ ಅಧಿಕಾರಿ, ಪ್ರಕೃತಿ ಹಾಗೂ ಮಾಯೆಯ ಮೇಲೆ ವಿಜಯವನ್ನು ಪ್ರಾಪ್ತಿ ಮಾಡಿಕೊಳ್ಳು ವಂತಹ ವಿಜಯೀ ನಕ್ಷತ್ರಗಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ಓಂಶಾಂತಿ.**

ಅವ್ಯಕ್ತ ಮುರಳಿ 28-01-1976.

***ಆತ್ಮಿಕ ನಕ್ಷತ್ರಗಳ ಮಹಾಸಭೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನನ್ನ ಇಡೀ ದಿನಚರಿಯಲ್ಲಿ ಸಂಕಲ್ಪ, ಶ್ವಾಸ, ಸಮಯ, ಕರ್ಮ ಮತ್ತು ಸಂಬಂಧ ಸಂಪರ್ಕಗಳಲ್ಲಿ ಸಫಲತೆಯ ನಕ್ಷತ್ರ.

2. ಸಫಲತೆ ನನ್ನ ಜನ್ಮ ಸಿದ್ಧ ಅಧಿಕಾರ.

3. ನಾನು ಪ್ರತಿ ಹೆಜ್ಜೆಯಲ್ಲಿ ಪದಮಗಳಷ್ಟು ಸಂಪಾದನೆಯನ್ನು ಮಾಡಿಕೊಂಡು, ನೆರಳಿನ ಹಾಗೆ ಕರ್ಮದ ಹಿಂದೆಯೇ ಸಫಲತೆ ಇರುವ ಅನುಭವವನ್ನು ಮಾಡಿಕೊಂಡಿರುವ ಸಫಲತೆಯ ನಕ್ಷತ್ರ.